ಕರ್ಣಾಟಕ ಕಾವ್ಯಕಲಾನಿಧಿ, ಕೋಶಸಂಖ್ಯೆ—೪೦

ನಂಜ ಕವಿಯ

ಕಪೋತವಾಕ್ಯಂ

(ಸಾಂಗತ್ಯಂ)

CHECKED 1956

ಎಂ. ಎ. ರಾಮಾನುಜಯ್ಯಂಗಾರ್ಯ
ಅಸಿಸ್ಟೆಂಟ್ ಮಾಸ್ಟರ್, ಮಹಾರಾಣೀ ಕಾಲೇಜ್, ಮೈಸೂರು—
ಇವರಿಂದ ಪರಿಶೋಧಿತವಾಗಿ

[illegible]
[illegible]
ಮೈಸೂರು
ಶ್ರೀನಿವಾಸ ಮುದ್ರಣಶಾಲೆಯಲ್ಲಿ ಮುದ್ರಿತವಾಯಿತು.

1912

ಮು ೧ ಆಣೆ]

UNIVERSAL LIBRARY
OU_200635
UNIVERSAL LIBRARY

PRINTED BY

S. NANJUNDA SASTRI

AT THE SREENIVASA PRESS, MYSORE

ಪೀಠಿಕೆ

ಕಪೋತವಾಕ್ಯವೆಂಬ ಈ ಸಾಂಗತ್ಯದ ಗ್ರಂಥಕರ್ತನು ತನ್ನ ಹೆಸರನ್ನು ಗ್ರಂಥದಲ್ಲಿ ಎಲ್ಲಿಯೂ ಹೇಳಿಕೊಂಡಿಲ್ಲ. ಮೆ|| ರೈಸ್‌ರವರು "ಕಂಠೀರವನರಸರಾಜಚರಿತ್ರೆ" ಯನ್ನು ಬರೆದ ಸಂಜಯ್ಯಕವಿಯೆ ಈ ಗ್ರಂಥವನ್ನೂ ಬರೆದವನೆಂದು ಹೇಳುತ್ತಾರೆ. ಕವಿಚರಿತ್ರಕಾರರೂ ಗ್ರಂಥಾನುಬಂಧದಲ್ಲಿ "ಕಪೋತವಾಕ್ಯ-ಸಾಂಗತ್ಯ-ನಂಜಕವಿ-" ೧೭ನೆಯ ಶತಮಾನದಲ್ಲಿ ಹುಟ್ಟಿದ್ದು ಎಂದು ಬರೆಯುತ್ತಾರೆ, ನಮಗೆ ಸಿಕ್ಕಿದ ಪ್ರತಿಯಲ್ಲಿ ರಕ್ಷಾಪತ್ರದಲ್ಲಿ ಮಾತ್ರ ನಂಜಕವಿಯು ಎಂದು ಬರೆದಿದೆ.

ಈ ಗ್ರಂಥಕರ್ತನು ವೀರಶೈವ ಮತದವನು. ಆದುದರಿಂದಲೇ ಗ್ರಂಥಾದಿಯಲ್ಲಿ ಕೋರಣ್ಯಾದಯ್ಯ, ಬಸವರಾಜ, ಮಡಿವಳ, ಸಪ್ಪಣ್ಣ, ಪ್ರಭುರಾಜ. ಮುಂತಾದವರನ್ನು ಸ್ಮರಿಸುವುದಲ್ಲದೆ, ಕೈಲಾಸದಿಂದ ಯರೆಮಲೆ ಪರ್ವತಕ್ಕೆ ಇಳಿದ ಒಂದು ಕಪೋತಪಕ್ಷಿಯ ಮುಖಾಂತರ ಶಿವನ ಪ್ರಸ್ಥಾನವನ್ನು ವರ್ಣಿಸಿ ಪುರುಷಾರ್ಥದ ಕಥೆಯಾದ ಈ ಗ್ರಂಥವನ್ನು ಹೇಳಿಸಿ, ಶಿವನಿಗೆ ಗ್ರಂಥಾಂತದಲ್ಲಿ ಮಂಗಳ ಮಾಡಿರುವನು. ಮತ್ತು ತಾನು ಚಂಪಕಸಿದ್ಧಲಿಂಗೇಶಗುರುವಿನ ಶಿಷ್ಯನೆಂದೂ ಗ್ರಂಥಾಂತದಲ್ಲಿ ಹೇಳಿರುವನು.

ಈ ಕವಿಯು "ಕಂಠೀರವನರಸರಾಜ ಚರಿತ್ರೆ" ಯನ್ನು ಬರೆದವನೇ ಆಗಿದ್ದ ಪಕ್ಷದಲ್ಲಿ ಕಂಠೀರವನರಸರಾಜ ಒಡೆಯರ (ಕ್ರಿ. ಶ. ೧೬೩೮-೧೬೫೯) ಸಮಾನಕಾಲಿಕನಾಗಿ, ಎಂದರೆ ೧೭ ನೆಯ ಶತಮಾನದ ಪೂರ್ವಭಾಗದಲ್ಲಿ ಇದ್ದಿರಬೇಕು. ಗ್ರಂಥದ ಶೈಲಿಯನ್ನು ನೋಡಿದರೆ ೧೭ ನೆಯ ಶತಮಾನಕ್ಕಿಂತ ಹಿಂದಕ್ಕೆ ಈ ಗ್ರಂಥದ ಕಾಲವನ್ನು ನೂಕುವುದಕ್ಕಾಗುವುದಿಲ್ಲ. ಕವಿಚರಿತ್ರಕಾರರೂ, ಮೆ|| ರೈಸ್‌ರವರೂ ಈ ಕವಿಯು ೧೭ ನೆಯ ಶತಮಾನದವನೆಂದು ಅಭಿಪ್ರಾಯಪಟ್ಟಿದ್ದಾರೆ.

ಕಪೋತವಾಕ್ಯದ ಇತಿಹಾಸವು ಬಹಳ ಪುರಾತನ ಕಾಲದಿಂದ ನಮ್ಮ ಭರತಖಂಡದಲ್ಲಿ ಪ್ರಚಾರದಲ್ಲಿದೆ. ವಾಲ್ಮೀಕಿಕೃತ ಶ್ರೀಮದ್ರಾಮಾಯಣದಲ್ಲಿ ಶರಣಾಗತರಕ್ಷಣವು ಯಾರಿಗೂ ಅವಶ್ಯಕರ್ತವ್ಯವು ಎಂದೂ ಶರಣಾಗತನಾದ ವಿಭೀಷಣನನ್ನು ತಾನು ಬಿಡಕೂಡದು ಎಂದೂ ನಿರೂಪಿಸುವ ಸಮಯದಲ್ಲಿ ಶ್ರೀರಾಮಚಂ

ದ್ರನು ಸುಗ್ರೀವಾದಿಗಳಿಗೆ ಈ ಇತಿಹಾಸವನ್ನು ಹೇಳಿದುದಾಗಿಹೇಳಿದೆ. ಈ ಗ್ರಂಥದಲ್ಲಿ ಪತಿಪತ್ನಿಯರ ಅನುರಾಗವೂ ಕರ್ತವ್ಯಗಳೂ ಚೆನ್ನಾಗಿ ನಿರೂಪಿತವಾಗಿವೆ.

ಇದರ ಬಂಧವು ಸರಳವಾಗಿದೆ; ಗ್ರಂಥವಿಷಯವು ಶ್ರೇಷ್ಠವಾಗಿದೆ. ಈ ಗ್ರಂಥದಲ್ಲಿ ೭೫ ರಿಂದ ೮೫ ವರೆಗಿನ ಸಾಂಗತ್ಯಗಳಲ್ಲಿ ಹೇಳುವ ವಿಷಯವು ಬಾಲಪಾಠಕರಿಗೆ ಯೋಗ್ಯವಲ್ಲವಾದುದರಿಂದ ಅವು ಬಿಡಲ್ಪಟ್ಟಿವೆ.

ಈ ಗ್ರಂಥದ ಪ್ರಚಾರದಲ್ಲಿ ಮ|| ರಾ|| ಯಸ್. ಜಿ. ಗೋವಿಂದರಾಜಯ್ಯಂಗಾರ್ಯರ ಸಹಾಯವು ಸ್ಮರಣೀಯವಾಗಿದೆ.

7–11- 1912. ಪ್ರವರ್ತಕ–

॥ ಶ್ರೀರಸ್ತು ॥

ಕಪೋತವಾಕ್ಯ

ಸಾಂಗತ್ಯ

ಗುರುವ ನೆನೆದು ಶಿವನಡಿಯ ಕೊಂಡಾಡುವೆ | ಹರಶರಣರಿಗೆ ವಂದಿಸುವೆ |
ಪರಮಪಾವನಮೂರ್ತಿ ಗುರುಸಿದ್ಧವೀರನ | ಚರಣವ ನಾ ಬಲಗೊಂಬೆ || ೧

ಪೂಲಿಗೆ ಪಾಯಸ ಗಾಲಿಗೆ ಛತ್ರಗಳ | ಮಾರಾರಿಶರಣರಿಗಿತ್ತು |
ಈ ರಾಜ್ಯ ಶಿವರಾಜ್ಯ ಸೂರೆಗೊಂಡಿಪನೊಬ್ಬ | ಕೋರಣ್ಯದಯ್ಯಗೆ ಶರಣು || ೨

ಶರಣು ಶ್ರೀಗುರುವಿಗೆ ಶರಣು ಶ್ರೀಹರನಿಗೆ | ಶರಣು ಬಸವರಾಜನಿಗೆ |
ಶರಣು ಮಡಿವಳಗೆ ಶರಣು ನಪ್ಪಣ್ಣಗೆ | ಶರಣು ಶ್ರೀಪ್ರಭುರಾಜನಡಿಗೆ || ೩

ಒಟ್ಟಕುಜಧ್ಯಾನನಿಷ್ಠೆಯಿಂದ್ರಿಯಗಳ | ಮಟ್ಟುಗೊಳಿಸಿ ನಿಲೆಹಿಡಿದ |
ಇಷ್ಟಲಿಂಗದ ಧ್ಯಾನ ನಿಷ್ಠೆಯ ಪರಬೊಮ್ಮ | ಕೊಟ್ಟೂರ ವಿರುಪಾಕ್ಷ ಶರಣು || ೪

ಒಲ್ಲರು ಹೇಳಿಯೆಲ್ಲುಂಟು ಈಶಾಂತಿ | ಕಲ್ಲು ಕರಗುವಂತೆ ನುಡಿದ |
ಎಲ್ಲ ಮಾಗುಣವುಳ್ಳ ಒಲ್ಲದ ತಿಳಿವಲ್ಲಿ | ಕಲ್ಯಾಣದಯ್ಯಗೆ ಶರಣು || ೫

ಮದ್ದುಮಂತ್ರವ ಒಲ್ಲ ವಿದ್ಯದಿ ಮೊದಲುಂಟು | ಸಿದ್ಧರ ಸಂಗಳೊಳಿಹವು |
ಬುದ್ಧಿಯಾಗಮದಲ್ಲಿರುತಿರೆ ಯರೆಮಲೆ | ಸಿದ್ಧಮುನಿಗಳಿಗೆಱಗುವೆ || ೬

ಧರೆಯ ಮೇಲಿರುವಂತ ತರುಗಳೆಲ್ಲವು ಬಂದು | ಪರಪುರುಷಾರ್ಥಕೆ ಎಂದು |
ನರಜನ್ಮಕೆ ಬಂದು ನರಕಿಯಾಗದ ಮುನ್ನ | ಪುರುಷಾರ್ಥದ ಕತೆ ಕೇಳು || ೭

ಹರನ ಕೈಲಾಸದಿಂ ಬಿಜಯ ಕಪೋತ | ಯರೆಮಲೆಯೆಂಬ ಪರ್ವತಕೆ |
ಸರಸಿಯೊಳಿರುತಿಹ ಪಕ್ಷಿಜಾತವು ಕಂಡು | ಹರುಷದಿ ಕೂಡಿ ಮಾತಾಡಿ || ೮

ಏನು ಕಾರಣ ನೀನೀಕಾಡಿಗೆ ಬಂದೆಯಿ | ದೇನು ಕಾರ್ಯವು ನಿನಗಿಲ್ಲಿ |
ಊನವಿಲ್ಲದೆ ಬೇಗ ಹೇಳೆಂದು ಕೇಳಲು | ಜ್ಞಾನದಿಂದಾಪಕ್ಷಿ ನುಡಿಯೆ || ೯

ಬಲ್ಲತನದಿ ಬೇಗ ಬಂದೆವು ನಾವೀಗ | ಮಲ್ಲಿಕಾರ್ಜುನಕೃಪೆವಿಡಿದು |
ಇಲ್ಲಿ ಕಂಡೆವು ನಿಮ್ಮಯೆಲ್ಲರ ಸಂದೋಹ | ಯಿಲ್ಲಿ ನೋಡಲು ನೀತಿಯೆನೆಯೆ || ೧೦

ಆವ ದೇಶಗಳಿಂದೆ ಹವಣಿಸಿ ಬಂದಿರಿ | ಭಾವದಿ ಪೇಳ್ವೆಮಗೆನಲು |
ನಾವೀಗ ದೇವರ ಲೋಕದಿಂದಿಳ್ದೆವು | ಭೂವಳಯವನು ನೋಡಲಿಕೆ || ೧೧
ನಿಮ್ಮ ಲೋಕದೊಳಿಹ ಧರ್ಮವ ಪೇಳೆಂದು | ಪೊಮ್ಮನದೊಳು ಬೆಸಗೊಳಲು |
ಉಮ್ಮಹದಲಿ ಪೇಳ್ವುದು ಕಪೋತಕನಾಗ | ಗಮ್ಮನೆ ಶಿವನಿರ್ಪ ತಾವ || ೧೨
ಹರನೆಡಬಲದಲ್ಲಿ ಹರಿಯಜಮುನಿಗಳು | ಇರುವರು ಭರವಶದಿಂದೆ |
ಧುರಧೀರ ಪಡೆವಳ್ಳ ಸುರರು ದಿಕ್ಪಾಲರು | ಇರುವರು ಶಿವನೆಡಬಲದಿ || ೧೩
ನಂದಿನಾಥನು ಭೃಂಗಿ ವೀರೇಶಷಣ್ಮುಖ | ಹೊಂದಿಹ ವಿಘ್ನೇಶ್ವರನು |
ಇಂದುಧರನಯೆಡಬಲದಲ್ಲಿ ಸೂರಿಯ | ಚಂದ್ರರು ಮೆರೆದು ರಾಜಿಪರು || ೧೪
ಸುತ್ತಲು ತೆತ್ತೀಸಕೋಟಿ ದೇವತೆಗಳು | ನೆತ್ತಿಲಿ ಗಂಗೆ ತೊಡೆಯೊಳು |
ಸತ್ಯಳು ಪಾರ್ವತಿಯೊತ್ತಿಲಿ ಗಣಗಳ | ಮೊತ್ತವದೇನ ಬಣ್ಣಿಸುವೆ || ೧೫
ಕಕ್ಕಯ್ಯ ಚೇಳಾಳ ರಕ್ಕಸ ಬೊಮ್ಮಯ್ಯ|ಸೊಕ್ಕಲಿಗರ ಮುದ್ದಯ್ಯ |
ಅಕ್ಕನಿಂ ನಿಂದರು ಒಲ್ಲಾಳ ಜೋಳರು | ಮುಕ್ಕಣ್ಣ ಶಿವನೆಡಬಲದಿ || ೧೬
ಚೆಂದೈಯ್ಯ ಪ್ರೀತಿಯ ನಂದಿಕೇಶ್ವರ ಮುನ್ನ | ಕಂದ ಗೂಪ ದೇವಯ್ಯ |
ಅಂದದ ಶಿವಶರಣರುಯಿಂತಿರುತಿಹ | ಚೆಂದವನೇನ ಬಣ್ಣಿಸುವೆ || ೧೭
ಚೆನ್ನಯ್ಯನಪ್ಪಣ್ಣ ಕಿನ್ನರಿಬೊಮ್ಮಯ್ಯ | ಮೊನ್ನನು ಕಪಿಕಾಮದೇವ |
ಉನ್ನತ ಪರಳಯ್ಯ ಮಧುವಯ್ಯ ಶ್ವಪಚಯ್ಯ | ಪನ್ನಗಧರನೆಡಬಲದಿ || ೧೮
ಕಂದ ಬೆಳ್ಳಾಳರು ಸಂಗಣ್ಣ ಭೌಮರು | ನಂದಿಕೇಶ್ವರ ಮೊದಲಾಗಿ |
ಬಂದುನಿಂತ ನೆರೆದರು ಸಂಗನ ಶರಣರು | ಇಂದುಧರನಯೆಡಬಲದಿ || ೧೯
ಇಂತಪ್ಪ ಶರಣರು ಸಂತೋಷದಿಂದಲಿ | ಕಂತುಹರನ ಯೆಡಬಲದೆ |
ಅಂತಕಾಂತಕ ರವಿಕೋಟಿಯ ಗಣಗಳು | ಸಂತೋಷದಿಂದಿರುತಿಪರು || ೨೦
ಶಿವನಿಹ ಕೈಲಾಸಪುರದಿಂದಲಿಳಿದೆವು | ಭವಯರಸನ ಕರುಣದಲಿ |
ತವೆ ಹದಿನಾಲ್ಕು ಲೋಕವ ಚರಿಸುತಲೀಗ | ಲವನೀಧರಕಿದಕಿಳಿದೆ || ೨೧
ಹೊಂದಾವರೆ ಗಿಡ ಮರಬಾಳೆ ಸಸಿಗಳ | ಚೆಂದವನೇನ ಬಣ್ಣಿಪೆವು |
ಒಂದಕ್ಕೆ ನೂರ್ಮಡಿ ಯೋಗಿಗಣಂಗಳು | ಬಂದರು ನಮ್ಮ ಪರ್ವತಕೆ || ೨೨
ಎಂದ ಮಾತನು ಕೇಳಿ ನಿಂದು ಕಪೋತಕ | ನೊಂದು ಸುಖದಿ ಬಾಳುತಿರಲು |
ಕಂದನ ಪಡೆದದು ಚೆಂದದಿಂದಿರುತಿರೆ | ಮುಂದೊಂದು ವಿಘ್ನ ಸಂಭವಿಸೆ || ೨೩
ಇರುತಿರೆ ಸುಖದಲ್ಲಿ ಮಗುಳೊಂದು ದಿವಸದಿ | ಭರದಿಂದೆ ಬೇಡ ಬೇಂಟೆಯನು |
ಸರವಲೆ ಹಾಸುವಲೆಗಳಿಂದೆ ಬಗಿದನು | ತರುಗಳ ಮರೆಯಲ್ಲಿ ಬರುತೆ || ೨೪
ಸುತ್ತ ಹನ್ನೆರಡು ಯೋಜನ ಯರೆಮಲೆಯೊಳ | ಗೊತ್ತಾಗಿ ಬಲೆಯ ಬೀಸಿದನು |

ನಿತ್ತರಿಸದೆ ಹಕ್ಕಿ ಬಲೆಯೊಳು ಬೀೞಲು | ಸುತ್ತಿ ಹಾಕಿದ ಕಲ್ಲಿಯೊಳಗೆ || ೨೫
ಗಂಡು ಹೆಣ್ಣುಗಳಂದು ಕೂಡಿ ಬಲೆಗೆ ಬೀೞೆ | ಖಂಡೇಂದುಧರ ನಮೋ ಎನುತೆ |
ಗಂಡನ ಹರಣವ ಬದುಕಿಪ ಯತ್ನದಿ | ದಿಂಡುಗೆಡೆದು ಹೊರಳ್ದೞುತೆ || ೨೬
ಪುರುಷ ಕೇಳ್ಳೈ ಎನ್ನವೋಲೆ ಭಾಗ್ಯದ ಪುಣ್ಯ | ಹರಸದಿ ನೀ ಬೇಗ ಪೋಗಿ |
ಮಱಿಗಳ ಸಲಹುತ್ತೆ ಸುಖಿಯಾಗಿ ಬಾೞೆಂದು | ಎಱಗಿ ಕಪೋತಿ ಬಿನ್ನವಿಸೆ|| ೨೭
ನೀಱೆ ಕೇಳೆಲೆ ನಿನ್ನ ಸೆಱೆಮಾಡಿ ನಾ ಪೋಗಿ | ಜೀಱಿನ್ನು ಹೇಗೆ ಜೀವಿಸಲಿ |
ನಾರಿ ಕೇಳೆಲೆ ನಿನ್ನ ಸುಖದುಃಖಕಿಲ್ಲದೆ | ಪೂಱಿ ಪೋದಡೆ ಫಲವಹುದೇ|| ೨೮
ಸತಿಯ ಮಾತನು ಕೇಳಿಯತಿದುಃಖಕೊಳಗಾಗಿ | ಸತಿಯಳ ನುಡಿಯ ಲಾಲಿಸುತ್ತೆ|
ಮತಿವಂತೆ ಬಲೆಗೆ ಸಿಕ್ಕಿದೆ ಹೇಗೆ ಹೋಗಲೆಂ|ದತಿ ದುಃಖದಲಿ ಬೆಸಗೊಳಲು || ೨೯
ನೀನು ಹೋದೇನೆಂಬ ಮನ ನಿಜವಾದಡೆ | ನಾನೊಂದು ಕಂಡಿಯ ಕೊರೆದು |
ಮೌನದಿ ನಾ ಹಿಂದೆ ಸಾಗಿ ಬರುವೆನೆಂದು | ಮೂನವಿಲ್ಲದೆ ಬೇಗ ಪೋಗು || ೩೦
ಕೆಟ್ಟ ಬೇಡನು ಕಟ್ಟಿಸೊಳು ಬದ್ಧ ಪಕ್ಕಿಯ | ಮೊಟ್ಟೆಯ ಕಟ್ಟಿ ತಾ ಹೊತ್ತು |
ದಿಟ್ಟನರಣ್ಯದಿ ಬರಲಸ್ತಮಯವಾಯ್ತು | ಕೆಟ್ಟುದ ನೋಡನೆಂಬಂತೆ || ೩೧
ಮಬ್ಬು ಮುಸುಕಿ ಬಲು ಹಬ್ಬಿದೆ ಕತ್ತಲೆ | ಯೊಬ್ಬನೆ ಘೋರಾಟವಿಯಲಿ |
ಇಬ್ಬದಿಯಲಿ ಸರವೃಷ್ಟಿ ಕೈಕಾಲ್ಗಳ | ಸುಬ್ಬರದಲಿ ನೂರೆ ದೊಗಲು || ೩೨
ಕಬ್ಬಟವೊಂದಂಗ ಮುಟ್ಟುವಬಸೆಯಿಲ್ಲ | ಹುಚ್ಚಾಗಿ ತಿರುಗಿದ ಬೇಡ |
ಮುಚ್ಚಿರೆ ನಡೆವನ ಕಣ್ಣು ಕತ್ತಲೆಯೊಳ | ಗಚ್ಚರಿಯದ ಮೞೆ ಬರಲು || ೩೩
ಗಡಗಡ ನಡುಗುತ್ತೆ ಗುಡುಗೂಳ್ಕೆ ನೋಕಾಲ | ನಡುವೆಯಿಟ್ಟನು ಬೇಡ ತಲೆಯ|
ಕಡಿದು ಹಲ್ಲಲಿ ತಾನು ಕಲ್ಲಿಬಲೆಯ ಮುಂದೆ | ಹಿಡಿದು ಹೋಯಿತು ಕಪೋತಕನು||
ಹಿಂದೆ ಹೋದೇನೆಂಬ ಸಮಯಕ್ಕೆ ಪಾರಿವ | ನಿಂದು ಸುಜ್ಞಾನದಿ ನೋಡಿ |
ಇಂದು ತನ್ನಯ ಹಸಿವಿಂಗೆ ಬಂದ ಬೇಡನ | ಹೊಂದದೆ ಹೋಗೆ ಪಾತಕವು || ೩೫
ಆಸೆಯ ಮಾಡಿ ಪಾಶವನೊಡ್ಡಿ ಕೆಡಹಿದ | ದೋಷಿತೃಷ್ಣೆಯ ಹಿಂಗಿಸದೆ |
ಮೋಸವ ಮಾಡಿ ಹೋದಡೆ ಮುಕ್ತಿಯಿಲ್ಲೆಂದು|ಪೇಸಱಿಲ್ಲದೆಯಿರುತಿಹಳು|| ೩೬
ಬಲೆಯಿಂದೆ ಪರಿದೋಡಿ ಬರುವಳು ಸತಿಯೆಂದು | ಗೆಲವಿಂದೆ ತರುವಿಕ್ಕೆಗಡರಿ |
ಲಲನೆಯ ಕಾಣದೆ ಲಾಗು ತಪ್ಪಿದುದೆಂದು | ಬಲುದುಕ್ಕಗೊಂಡು ಬೞಲುತ್ತೆ|| ೩೭
ಬರುವಳಂಗನೆ ಬೆಂಬೞಿಯೆಂದು ಬಂದೆನಾ | ನಱಿಯೆನಂಗನೆಯುೞಿವುದನು |
ಸೆಱೆಯಾದೊ ಶಬರಗೆ ಸತಿಯೆಂದು ಶೋಕಿಸಿ | ಗರುವೆಯನಗಲ್ದೆಂತು ಬಾೞ್ವೆ||
ಮಕ್ಕಳ ಬಿಟ್ಟೀಗ ದುಕ್ಕವನೆನಗಿಕ್ಕಿ | ಸಿಕ್ಕಿದೆ ಬೇಡನ ಬಲೆಗೆ |
ತಕ್ಕ ಮಾತದು ಬೞಿಕಕ್ಕಱಿಂದಲಿ ನೀನು | ಪೊಕ್ಕಣೆಸುತಲೆನ್ನ ಕಳುಹಿ || ೩೯

ಮಾನಿನಿ ಸಿಕ್ಕಿದೊ ಮಾನಭಂಗದ ದುಕ್ಕ | ತಾನೊಬ್ಬನುೞಿದೇನು ಫಲವು |
ಏನೆಂಬಳಯ್ಯೊ ಏಣಾಕ್ಷಿ ತನ್ನರಸಿಯು | ತಾನೆನ್ನ ಬಿಟ್ಟನೆಂದಪಳು || ೪೦
ಹಣ್ಣನೊಳ್ಳಿತ ಕಂಡು ಉಣ್ಣಳಾನಿಲ್ಲದೆ | ಹೆಣ್ಣ ನಾ ಹೇಗೆ ಮಱೆಯಲಿ |
ಪುಣ್ಯಳಾದೆಲೆ ನೀನು ಹರುಷಳು ಮುತ್ತೈದೆ | ಕಣ್ಣಿಲ್ಲದಂತಾದೆ ನಾನು || ೪೧
ಊಟವಿನ್ನೇತಕೆ ಯೊಲಪಿನೊಳಿಲ್ಲದೆ | ಪಾಟಿಪ ಮುಪ್ಪಿಗಾರುಂಟು |
ಕೋಟಲೆ ಕೊರಲನು ಕಿತ್ತುಱಿ ಗೂಡಿನ | ಗೋಟಿಗೆ ಸೊಪ್ಪಿತವಾದೆ || ೪೨
ಅಯ್ಯಯ್ಯೊ ಶಿವಶಿವ ಕಯ್ಯಾಱಿ ಸೆಱಿಗೊಟ್ಟೆ | ಮುಯ್ಯಾದೆ ದುಕ್ಕಕ್ಕೆ ನಾನು |
ಹುಯ್ಯಲಿಟ್ಟೆಱುವೊಡೆ ಕೇಳುವರಿಲ್ಲೆಂದು | ಬಾಯ ಬಿಟ್ಟುದು ಕಪೋತಕನು || ೪೩
ನಾಯಕಿ ಮನೆಮನೆಸೇವಕಿ ಪರಹಿದ | ದಾಯಕಿಮ್ಮಡಿ ಮಾಡುವಾಕೆ |
ಬಾಯೊಱಿ ಸತ್ತಡೆ ಮನದೆ ಚಿಂತಿಸೆ ಹೞಿ | ನಾಯೆಂದು ಸೀಯೆನಾನವಳ || ೪೪
ಬಡತನ ಬಂದಡೆ ಯೆಡರು ಆಪತ್ತಿಲ್ಲ | ದೆಡೆಗೆಡೆದಲ್ಲಿರುತಿರುವ |
ಬಡಮನವಿಲ್ಲದೆ ಸಡಗರದೊಳಗಿಹ | ಮಡದಿಯಾದಡೆ ನಿನ್ನ ನೆನೆಯೆ || ೪೫
ಮಂಡಲದೊಳಗಿಲ್ಲ ಮಾನಿನಿ ನಿನ್ನಂತೆ | ಪಂಡಿತವಕ್ಕಿಯ ಕಾಣೆ |
ಖಂಡುಗವನೆ ಮಾಡಿ ಬೞಿಸುವ ಸತಿ ಕುಲ | ಭಂಡೆಯಾದಡೆ ನಿನ್ನ ನೆನೆಯೆ || ೪೬
ಮಥನಿಸಿ ಮನೆಯೊಳು ಕದನ ಕಲಹದಿಂದ | ಮತಿಗೇಡಿತನದೊಳಗಿಹಳ |
ಗತಿಗೇಡಿ ಗಂಡನ ಖತಿಮಾಡಿ ಬೈವಂತ | ಸತಿಯಳಾದಡೆ ನಿನ್ನ ನೆನೆಯೆ || ೪೭
(ಸರಸದ) ಸಮಯದೆ ಕರೆಕರೆ ಹೋರಾಟ | ಬೞಿದೆ ಮುನಿದು ಮುನಿಸುವಳ |
ಕಱುಬತನದಿನುಱಿ ಗರುವಿಸಿ ಕೊಂಡಿರ್ಪ | ತರುಣಿಯಾದಡೆ ನಿನ್ನ ನೆನೆಯೆ || ೪೮
ಗಂಡನ ಮಾತಿಗೆ ಗಣನೆಗೊಳ್ಳದೆ ಹಿರಿ | ದಂಡಲೆಯುತೆ ಕೆಲದಾಡಿ |
ಕಂಡುದ ಬಯಸುತೆ ಬಹುಕಾಮದೊಳಿರ್ಪ | ಭಂಡೆಯಾದಡೆ ನಿನ್ನನೆನೆಯೆ || ೪೯
ಘುಡಿಘುಡಿಸುತೆ ಬಂದು ನುಡಿಗೆ ಮಚ್ಚರಿಸುವ | ತುಡುಗಣಿ ಮನದ ಪ್ರಿಯಳಿಗೆ |
ನುಡಿಗೆ ನುಡಿಗೆ ಗಂಡನ ಕೆಡೆ ಬೈವಂತ | ಮಡದಿಯಾದಡೆ ನಿನ್ನ ನೆನೆಯೆ || ೫೦
ಹೆಡ್ಡನ ಮಾಡಿಸುತೇಡಿಸಿ ಗಂಡನ | ಕಡ್ಡಿ ಹೊಱುತೆ ಕಾಡುವಳ |
ದಡ್ಡತನದಿ ಹೀಗೆ ಹೆಡ್ಡೆಯಾಗಿರುವಂತ | ಮಡ್ಡಿಯಾದಡೆ ನಿನ್ನ ನೆನೆಯೆ || ೫೧
ಪುರುಷಗೆ ಮಱುಮಾತುಗಳನು ಕುಡುವಳ | ಪೆಱರೊಳು ದೂರುವೇೞುವಳ |
ಪೊಱುಮಾತು ಪರಸಂಗ ಜಾರೆಯಾಗಿರುವಂತ|ದುರುಳೆಯಾದಡೆ ನಿನ್ನ ನೆನೆಯೆ|| ೫೨
ಗಂಡ ಹೋಗದ ಮುನ್ನ ಮಿಂಡರ ಕರೆಯುತೆ | ಕಂಡೀಲಿ ಸಿಲುಕಿ ನೋಡುವಳ |
ಕಂಡಕಂಡವರೊಳು ಭಂಡಾಟವಾಡುವ | ಪುಂಡೆಯಾದರೆ ನಿನ್ನ ನೆನೆಯೆ || ೫೩
ಹರೆಯದವರ ನೋಡಿ ಗುರುಕುಚವನೆ ತೋಱಿ | ಸರಸವಾಡುತ್ತೆ ವಿರಹದಿ |

ಮರಳಿ ಪುರುಷ ಬರೆ ಕರೆಕರೆಗೆಯ್ವಂತ | ದುರುಳೆಯಾದಡೆ ನಿನ್ನ ನೆನೆಯೆ || ೫೪
ಅಡಿಗೆಯಾಗದ ಮುನ್ನ ಕುರುತಿಂಡಿ ತಿಂಬಳ | ಗಡಬಡಿಸುತೆ ಬಾಯಾಡುವಳ |
ಕಡುಗೇಡಿತನದೊಳಗೊಡಲ ಹೊರೆಯುವಂತ | ತುಡುಗೆಯಾದಡೆ ನಿನ್ನ ನೆನೆಯೆ ||
ಉತ್ತರವಿತ್ತವಳಲ್ಲವೆನ್ನೆದಿರಿಗೆ | ಮತ್ತಿಲ್ಲ ನಿನ್ನಂತ ಮಡದಿ |
ಮಿತ್ರಾಗಿ ಮನೆಯೊಳಗಿರುವ ಹೆಣ್ಣಾದಡೆ | ಸತ್ತಳೆಂದತ್ತಡೆ ನರಕ || ೫೬
ಸಾವು ತಪ್ಪದು ದೊಡ್ಡ ಜೀವಕೆಂದಿದ್ದರು | ನೋವು ಸಲ್ಲದು ಈವಾಗ |
ಆವಾವ ಗುಣಗಳ ನೆನೆವೆನಲ್ಲದೆ ನಿನ್ನ | ಜೀವಕೆ ಮಱುಗುವನಲ್ಲ || ೫೭
ಕಂಡಕಂಡವರೊಳು ನೇಹವ ಬಲಿಯುವ | ದಿಂಡೆವೆಣ್ಣಲ್ಲವೆ ನೀನು |
ಕೊಂಡಾಡ ಬಾರದ ಗುಣವನು ಮಾನಿನಿ|ಕಂಡು ನಾ ಹೇಗೆ ಮಱೆಯಲಿ || ೫೮
ಅಕ್ಕಱು ಬಲೆಗೆ ಸಿಕ್ಕಿದ ಸತಿಗೋಸುಗ | ದುಕ್ಕವೆರಸಿ ಮೊಗ ಬಾಡಿ |
ಮಿಕ್ಕ ಮಾತಿನ್ನೇಕೆ ಹರಣದ ಹಂಗಿಲ್ಲ | ದುಕ್ಕವೆರಸಿ ಕಪೋತಕನು || ೫೯
ದುಕ್ಕವ ಮಾಡುವ ಹಕ್ಕಿಯಡೆಗೆ ದಿಕ್ಕು | ದಿಕ್ಕಿನ ಹಕ್ಕಿಗಳೆಯ್ದಿ |
ಗಕ್ಕನೆ ಕೇಳಿದುವತ್ತೆಯಾತಕೆ ಎಂದು | ಒಕ್ಕಣಿಸುತಲೆಮ್ಮ ಕಳುಹು || ೬೦
ಆಡುವೆ ನಾನೊಂದ ನಾಡಾಡಿ ಹೆಣ್ಣಲ್ಲ | ಕೂಡಿಯಗಲದಿರ್ಪ ಸತಿಯು |
ಬೇಡನ ಬಲೆಯೊಳು ಸಿಕ್ಕಿದ ಸತಿಯೊಡ | ಗೂಡದ ಹರಣವಿನ್ನೇಕೆ || ೬೧
ಸತಿಯು ಸಿಕ್ಕಿದಳಯ್ಯೊ ಗತಿಗೆಟ್ಟು ನಾನಿಂದು | ಕ್ಷಿತಿಯೊಳು ಹೇಗೆ ಜೀವಿಸಲಿ |
ಅತಿಹಿತದಿಂದೆ ಕೂಡಿರುವಂತ ಸತಿಯುಳ | ಪೃಥಿವಿಯೊಳಗಲಿರಲಾಱೆ || ೬೨
ಪತಿಯ ಮಾತನು ಕೇಳಿ ಹಿತವಾಗಿ ಸೇವೆಯ |ನತಿಹಿತದೊಳು ಮಾಡುವಂತ |
ಸತಿಯುಳನಗಲಿ ಜೀವಿಸುವುದಕಿಂದಲೆ | ಮೃತವಾಗುವುದತಿ ಲೇಸು || ೬೩
ಕೇಳಿಲೆ ಎಲೆ ಪಕ್ಷಿಯಾಲೋಚನೆಯೇಕೆ | ಹೇೞುವೆ ನಾನೊಂದು ಮಾತ |
ಬಾಳ ಪ್ರೀತಿಯ ಮೋಹ ಸಲ್ಲದು ಹೆಣ್ಣಿಗೆ | ಗೋಳಿಟ್ಟೞುವುದು ಸಲ್ಲ || ೬೪
ಸತಿಯಳು ಸತ್ತಡೆಯತಿದುಃಖಗೊಂಬರೆ | ಪ್ರತಿಹೆಣ್ಣನೊಂದ ತರುವುದು |
ಹಿತವಾಗಿ ಕೂಡಿ ಸಂತಸದಿ ಬಾೞುವುದೆಂದು | ನುತಿಸಿ ಹೇೞಿದುದೊಂದು ಹಕ್ಕಿ ||
ಕೇಳಲೆ ಎಲೆ ಹಕ್ಕಿ ಬಾೞ್ವಮಾತಿನ್ನೇಕೆ | ಚೂಳೀಲಿ ಬಂದ ಸ್ತ್ರೀಯೞಿಯೆ |
ಕೂೞಿನಿಚ್ಚೆಗೆ ಬಂದ ಕೀೞುಲಕ್ಕಣವೆಣ್ಣ | ಬಾಳ ಸುಡೆಂದುದು ಪಕ್ಷಿ || ೬೬
ಜೇತಕೆ ಬಾರದ ಸತಿಯಳು ಮನೆಯೊಳು | ಮಾತನಾಡಲು ಪುರುಷರಿಗೆ |
ಭೂತದ ದನಿಯ ಕೇಳಿದ ಹಾಗೆ ಕಿವಿಯೊಳು | ಭೀತಿಯಾಗುವುದಂಜುವೆನು || ೬೭
ಒಡೆದ ಗಡಿಗೆಯೊಳಗುದಕವ ತುಂಬಿಟ್ಟು | ಅಡಿಗೆಯ ಮಾಡುವರುಂಟೆ |
ಒಡಲೊಳಗಣ ಪ್ರಾಣ ನುಡಿವಂತ ಸತಿಯಳ | ಯೆಡೆಯಲ್ಲಿ ಬಿಟ್ಟು ಜೀವಿಪೆನೆ|| ೬೮

ಪತಿ ಬಂದು ಮನೆಯ ಬಾಗಿಲ ಮುಂದೆ ಕರೆಯಲು|ಅತಿ ಬೇಗದಲಿ ಬೆಸಗೊಳುವ|
ಹಿತವಾಗಿ ನಡೆವಂತ ಸತಿಯಳ ಬಿಟ್ಟಡೆ | ಗತಿಯಿಲ್ಲ ಮುಂದೆ ಸಗ್ಗದಲಿ || ೧೯
ಉದಯದೊಳೆದ್ದು ಗಂಡನ ಪಾದದ ಮೇಲೆ | ಮುದದಿಂದೆ ಶರಣೆಂದು ಬಱಿಕ |
ಸದನದ ಕೆಲಸವ ಮಾಡುವ ಸತಿಯಗ | ಲಿದು ಪೋದಡೆ ಗತಿಯಿಲ್ಲ || ೨೦
ಗಂಡ ಬೇಱೂರಿಗೆ ಹೋಗಿ ತಡೆದು ನಿಲೆ | ಮಂಡೆ ಮಜ್ಜನಗಳನುಱಿದು |
ಗಂಡನ ಮೇಲೆ ಪ್ರಾಣವನಿಟ್ಟು ನಡೆವಳ | ಕಂಡಡೆ ಜನ್ಮ ಪಾವನವು|| ೨೧
ಪತಿ ತನ್ನ ಕೋಪದಿ ಸತಿಯಳ ಬಡಿದಡೆ | ಖತಿಯ ತಾಳದೆ ಮನದೊಳಗೆ |
ಅತಿಹಿತದಿಂದೆ ಕೂಡಿರುವಂತ ಸತಿಯಳ | ಪ್ರತಿದಿನ ಬಿಟ್ಟಿರಲಾಱೆ || ೨೨
ಬಡತನವಡಸಿದ ಕಾಲಕ್ಕೆ ಗಂಡನ | ನುಡಿಗೆಡಿಸದೆ ಗರ್ಭೀಕರಿಸಿ |
ದೃಢಗೆಡದಂದದಿ ನಡೆಯುವ ಸತಿಯಳ | ಬಿಡುವ ಮನುಜ ಶತದ್ರೋಹಿ || ೨೩
ಪುರುಷನ ಸೇವೆಯ ಹರಿಸದೆ ಮಾಡುತ | ಲೊರಸಿ ತೊಳೆದು ಪದತಳವ |
ವಿರಸವಿಲ್ಲದೆ ನಗೆ ನುಡಿಯುಳ್ಳ ಸತಿಯನು | ಪರಸದವನು ನರಗುಱಿಯು || ೨೪

... ...

... ...

... ...

... ...

ಮಚ್ಚರ ಮನದೊಳಗಿಚ್ಚೆಯು ಪರರೊಳು | ರಚ್ಚೆಗೆ ಒರುವಂತ ಸತಿಯು |
ಹುಚ್ಚಾಗಿ ಕಾಮಾತುರದ ಹೆಣ್ಣಾದಡೆ | ಮಚ್ಚೆಂದು ಸೀಯೆ ನಾನವಳ || ೮೬
ಜಗಳವೆಂದರೆ ಬೇಗಲಗಡುತನವ ತೋಱಿ | ಒಗೆಯದೆ ಪುರುಷನ ಮಾತ |
ನಗೆಗೇಡಿತನದಲ್ಲಿ ಬಗುಳಾಟದೊಳಗಿಪ | ವಿಗಡೆಯಾದಡೆ ನಿನ್ನ ನೆನೆಯೆ || ೮೭
ಮುಂಚಾಗಿ ತಾನುಂಡು ವಂಚಿಸಿ ಧವಗೆ ಪ್ರ | ಪಂಚವ ಮಾಡಿ ನೀಡುವಳ |
ಸಂಚಿನ ಮಾತನೆಯುಂಟುಮಾಡುವ ಹೆಣ್ಣ | ಹಂಚೆಂದು ಸೀಯೆ ನಾನವಳ|| ೮೮
ಹಸಿದವರನು ಕೂಡಿ ಪುರುಷ ಮನೆಗೆ ಬಂದು | ಅಸಿಯಳ ಕೇಳಲಾಕ್ಷಣದಿ |
ಗುಸುಗುಟ್ಟಿ ಕೊನರುವ ಪಿಶುನಮನದ ಹೆಣ್ಣ | ಕಸವೆಂದು ಸೀಯೆ ನಾನವಳ|| ೮೯
ಎಂದು ಕಣ್ಣೊಳು ನೀರ ತಂದು ತಮ್ಮಿರ್ವರು | ಕಂದರ ಬಿಗಿಯಪ್ಪಿಕೊಳುತೆ |
ಇಂದು ಜೂಟನೆ ಯಿಷ್ಟು ಬಂಧನವನು ಕೊಟ್ಟೆ | ಯೆಂದು ಮನದಿ ಮಱುಗುತ್ತೆ ||
ತಾಯಿಲ್ಲವಣುವರ್ಗೆ ಬಾಯಿಲ್ಲ ಸಿರಿಯಿಲ್ಲ | ಬಾಯೆಂದು ಕರೆವವರಿಲ್ಲ |
ಕಾಯ ಬಲಿಸಿ ನಿಮ್ಮ ಹಾಯಾಗಿ ಸಲಹುವ | ತಾಯಗಲಿದ ಮಱಿಗಳಿರ|| ೯೧
ಗಱಿ ಬಲಿಯದ ಮುನ್ನ ಪರದೇಸಿಯಾಗುತೆ | ಹೆಱರ ಮನೆಯ ಬಾಗಿಲೊಳಗೆ |

ನೆಱಕೆ ಬಾಯ ಬಿಡುವುದ ನಾಕಂಡು ನಿಮ್ಮನು | ಮಱುಗಲಾಱೆನು ಮಱಿಗಳಿರ||
ಹೆತ್ತವರಿಲ್ಲದ ಪುತ್ರರ ಕಂಡಡೆ | ನೆತ್ತಿಯಮೇಲೆ ಕುಟ್ಟುವರು |
ಇತ್ತಲೇಕಕೆ ಬಂದೆಯತ್ತಲೆ ಹೋಗೆಂದು | ಕತ್ತ ಪಿಡಿದು ನೂಕುವರು|| ೯೩
ಸತಿಗಿಂತ ಮುಂತಾಗಿ ಸಾವುದೆ ಪುರುಷಗೆ | ಹಿತವಪ್ಪುದಯ್ಯ ಸಜ್ಜನಕೆ |
ಗತಿಗೆಟ್ಟೆನಿನ್ನೇಕೆ ಬಾಱೆಂದು ಬಱಲುತೆ | ಸತಿಯ ಬರವ ಕಂಡನಾಗ|| ೯೪
ಬಲೆಗೆ ಸಿಕ್ಕದೆ ಬೇಗ ಹೋದ ಗಂಡನ ಕಂಡು | ಗೆಲುವಾದಳಾಗ ಕಪೋತಿ |
ಅಱಿವುದು ಯೆನ್ನ ಮುತ್ತೈದೆಯ ಮರಣಕ್ಕೆ |ಬೆಲೆಯುಂಟೆ ಭೂಲೋಕದೊಳಗೆ ||
ಪುರುಷನುಳ್ಳೊಡೆಯೆನ್ನ ಕರೆಸುವರಯ್ಯಂದು | ಹರಿಸದಿ ಕಳಸಕನ್ನಡಿಗೆ |
ಅರಸಿನ ಗಂಧಾಕ್ಷತೆಗೋಲೆಭಾಗ್ಯವು | ಕರಿಮಣಿ ಒಳೆ ಕರ್ತನಿರವು|| ೯೬
ಸಕ್ಕರೆವಿಲ್ಲನ ರೂಪನೆ ಯೆನ್ನದೊಂ | ದಕ್ಕಱ ಪತಿಯು ನೀನೀಗ |
ದುಕ್ಕದಿ ಚಳಿಯಿಂದೆ ಬಱಲುವ ಬೇಡಗೆ | ತಕ್ಕ ಬುದ್ಧಿಯ ಮಾಡೊ ಪುರುಷ|| ೯೭
ಅಕ್ಕಱೆಯಾಗಿಹ ಸತಿಯಳ ಮುಗುಕವಿ | ದಿಕ್ಕೆಂಟ ನೋಡಿ ಕಪೋತ |
ಕೊಕ್ಕಿಂದ ಕಚ್ಚಿ ತಂದಿತು ಕಾಡ ಕೊಳ್ಳಿಯ|ಸಿಕ್ಕಿತು ಅಂಜಿನಗೂಡಿ || ೯೮
ಪಕ್ಕದೆ ಬೀಸುತೆ ಪುಟಮಾಡಿ ಬೆಂಕಿಯ | ಗಕ್ಕನೆ ತಾ ಹಾಱಿ ಹೋಗೆ |
ಸೊಕ್ಕಿದ ಬೇಡನು ಸುಖಿಯಾಗಿ ಕಾಸಿ ತಾ | ಸೊಕ್ಕಲಾದನು ಮನದೊಳಗೆ ||
ಹುಟ್ಟಿದೆ ತಾಯ ಯವ್ವನಕೆ ಕೊಡಲಿಯಾಗಿ | ಕಟ್ಟಿ ಬಾಧಿಸಿದೆ ನಾ ಪರರ |
ಮುಟ್ಟಿ ಕೈಧರ್ಮವ ಮಾಡಿಲಿಲ್ಲವು ಎಂದು | ಪಟ್ಟ ಕಲ್ಲಿಯ ಪಕ್ಷಿಗಳನು || ೧೦೦
ವಿಪರೀತವಾಗಿ ಹಾರಿದ ಪಕ್ಷಿಯ ಕಂಡು | ಉಪಮೆಯ ಬೇಡ ನೋಡಿದನು |
ಕಪಟ ಬುದ್ಧಿಯ ಪಟ್ಟ ಕಾಡ ಬೇಡನು ಕಂಡು | ಸ್ವಪನದೆ ಜ್ಞಾನ ಬಂದಂತೆ ||
ಎನ್ನ ಗುಣವ ನೋಡದೆ ಬೆಂಕಿಯ ತಂದು | ಚೆನ್ನಾಗಿ ನೀವು ಕಾಸಿದಿರಿ |
ಇನ್ನೊಂದ ಬೇಡುವೆ ಎಲೆ ಪಕ್ಷಿ ಹಸಿದೆನು | ಅನ್ನವ ಕಾಣಿಸ ಬೇಕು || ೧೦೨
ಎಂದ ಮಾತನು ಕೇಳಿ ನಿಂದು ಕಪೋತಕಿ | ಬಂದಳಾಗಳವನಶನಕ್ಕೆ |
ಬಂದಾಗ ತಿಳುಹಿದೆನೆಂದು ಕಪೋತಿಯು | ನಿಂದಿರದೊಲು ಕಿಚ್ಚ ಬೀಱೆ|| ೧೦೩
ಕಂಡು ಬೇಗದಿ ಬಂದು ಗಂಡುಪಕ್ಕಿಯು ಬೀಱೆ | ಕೆಂಡವ ಪುಟಮಾಡಿ ಶಬರ |
ಗಂಡಹೆಂಡರು ಎನಗಾಗಿ ಮಡಿದರೆಂದು | ಕೊಂಡದೆ ಬಿದ್ದನು ಬೞಿಕ|| ೧೦೪
ಕಿಚ್ಚಿಗೆ ಬಿದ್ದಂತ ಅಚ್ಚರಿಯನು ಕಂಡು | ಮೆಚ್ಚುತ ಶಿವನು ಪಾರ್ವತಿಯು |
ಮೆಚ್ಚಿ ಪ್ರಾಣವ ಕುಡೆ ಹರಿಸದಿಂದಲಿ ಬಂದು | ವೃಷ್ಟಹದಲಿ ಪಾದಕೆಱಗೆ|| ೧೦೫
ಎಱಗಿದವರನೆತ್ತಿ ಹರನು ಪುಷ್ಪಕದೆ ಕು | ಳ್ಳಿರಿಸಿ ಕೈಲಾಸಪುರಕ್ಕೆ |
ಹರಿಸದಿ ಕರೆತಂದು ತನ್ನ ಸನ್ನಿಧಿಯೊಳು | ಇರಿಸಿದನಾನೇನ ಪೇೞ್ವೆ|| ೧೦೬

ಅಂತವರಿಗೆ ಸಗ್ಗ ಶತಕಾಲವಾಯಿತ | ನಂತಕಾಲವು ಪರಹಿತಕೆ |
ಸಂತಸದಿಂದಲನ್ನವನಿತ್ತ ನರರಿಗ | ನಂತಪದವಿಯೀವ ಶಿವನು || ೧೦೭

ಪರಹಿತದಿಂದಲಿ ನಡೆವ ಸತ್ಪುರುಷರ | ಕರೆದುಯ್ವನು ಕೈಲಾಸಕ್ಕೆ |
ಪರಪುರುಷಾರ್ಥವಗ್ಗೈದರೆ ಮುಕುತಿಯ | ನಿರದೀವನು ನಿಶ್ಚಯವು || ೧೦೮

ವರಗುರುಮೂರ್ತಿಯ ಕರುಣದಿ ಪೇಳ್ದೆ | ನುರುತರಕಾವ್ಯಮಾಲೆಯನು |
ಧರಿಸುತ್ತೆ ಮೆಱೆಯಿಪ ಶರಣರ ಸಂಘಕ್ಕೆ | ಸಿರುತ ಸೌಭಾಗ್ಯದೊರೆವುದು ೧೦೯

ಈಕತೆಯನು ಏಕಚಿತ್ತದಿ ಕೇಳ್ವಗೆ | ಸಾಕಾರನಾಗುವ ಶಿವನು |
ಬೇಕಾದ ಪದವಿಯನಿತ್ತೀವ ಚಂದ್ರ | ಶೇಖರಲಿಂಗಕ್ಕೆ ಶರಣು || ೧೧೦

ಪುಲಿಸಮ್ಮವನುಟ್ಟ ಹರನಿಗೆ ಜಾಣಾ | ಸುರನ ಬಾಗಿಲ ಕಾದವಗೆ |
ಅಲರುವಿಲ್ಲನ ಸುಟ್ಟು ಬೂದಿಯ ಧರಿಸಿದ | ಶಿವನಿಗೆ ಮಂಗಳಾರತಿಯು|| ೧೧೧

ಕಪ್ಪುಗೊರಲಿಗೆ ಕಂದರ್ಪಪಿತಹಿತ | ಮುಪ್ಪುರ ಗೆಲಿದಂತ ಶಿವಗೆ |
ಸರ್ಪಭೂಷಣನಿಗೆ ಮುನಿಜನಸ್ತೋತ್ರಗೆ | ಯೊಪ್ಪಿಯಾರತಿ ಬೆಳಗುವೆನು|| ೧೧೨

ಗಜಚರ್ಮಾಂಬರನಿಗೆ ಗೌರಿಯ ರಮಣಗೆ | ತ್ರಿಜಗವ ಪೊರೆಯುವ ಶಿವಗೆ |
ಅಜಹರಿಸುರರೆಲ್ಲ ವಂದಿಸುತಿರುತಿಪ | ಭುಜಗಭೂಷಣನಿಗಾರತಿಯು|| ೧೧೩

ಗಂಗಾಧರನಿಗೆ ಮಂಗಳಮಹಿಮಗೆ | ಸಂಗ ಬಸವ ಲಿಂಗನಿಗೆ |
ಹಿಂಗದೆ ಭಕ್ತರುತ್ತುಂಗಪದವನೀವ | ಲಿಂಗೇಶ್ವರನಿಗಾರತಿಯು || ೧೧೪

ಕಾಮಿತಫಲವೀವ ಕಾರುಣ್ಯಸಿಂಧುಗೆ | ನೇಮನಿಷ್ಠೆಯೊಳಿರುತಿಪಗೆ |
ಕಾಮನೈಯುಗೆಯರ್ಧಾಂಗವನಿತ್ತ ಹರಿಹರ | ನಾಮಗೆ ಮಂಗಳಾರತಿಯು|| ೧೧೫

ಧರೆಯೊಳು ಸನ್ಮೂಲಶಿಖರಿನಿವಾಸಗೆ | ಕರುಣಿ ಕಾಶಿಯ ವಿಶ್ವೇಶ್ವರಗೆ |
ಗುರುವರನಹ ಚಂಪಕ ಸಿದ್ಧಲಿಂಗೇಶ | ಗೆಱಗಿಯಾರತಿ ಬೆಳಗುವೆನು|| ೧೧೬

ಇಂತು ಕಪೋತವಾಕ್ಯಂ ಸಂಪೂರ್ಣಂ